ಒಳಗೆ ಹೋದದ್ದುಂಟೋ?' ಎಂದರು. ಪೂಜಾರಪ್ಪನವರ ಈ ಮಾತು ಕೇವಲ ನಿತ್ಯದ ಹೊತ್ತು ಹೋಗದ, ಇಲ್ಲವೇ ಚೋದ್ಯದ ಮಾತಾಗಿದ್ದಿತಷ್ಟೆ.

ಪ್ರಾಯಕಾಲದಲ್ಲಿ ಮೈಸೂರು ದಸರಾ ಟೈಮಿನಲ್ಲಿ ಅರಮನೆಯ ಮುಂದೆ ಕುಸ್ತಿ ಹಿಡಿಯುತ್ತಿದ್ದ ರಾಮಣ್ಣನನ್ನು ಕಂಡಾಗಲೆಲ್ಲ ಕೆಣಕುವುದು, ಅವನಿಂದ ಮಾಲಿನತ್ತ ಬರುವವರನ್ನು ಶತನಾಮಾವಳಿಯಲ್ಲಿ ಬೈಸುವುದು ಪೂಜಾರಪ್ಪನವರಿಗೆ ಇಷ್ಟ. ಆ ನಿಮಿತ್ತದಲ್ಲೇ ಎಂದಿನಂತೆ ನೀನು ಎಂದಾದರೂ ಈ ಇಂದ್ರನ ಅರಮನೆಗೆ ನುಗ್ಗಿದ್ದುಂಟೇ ಎಂದಿದ್ದರು. ಆದರೆ ರಾಮಣ್ಣನು ಸಮಾಧಾನದಲ್ಲಿಯೇ 'ಅಯ್ಯ ತಗಳೀ ಪೂಜಾರಪ್ಪ... ದಿನಾ ಮಗಳೇ ಹೋಗಿ ಬತ್ತಾಳಲ್ಲ. ಇನ್ನು ನಾನ್ಯಾಕೆ? ಚಿನ್ನ, ಬೆಳ್ಳಿ, ಮಾರುವಂತ ಅಂಗಡೀಲಿ ನಾಯಿಗೂ ನೊಣಕ್ಕೂ ಏನು ಕ್ಯಾಮೆ? ಅಷ್ಟಕ್ಕೂ ಮಗಳು 'ಅಪ್ಪಯ್ಯ ನೀನು ಯಾವತ್ತೂ ಒಳಗೆ ಬರಬ್ಯಾಡ, ದಾರಿ ಗೊತ್ತಾಗಲ್ಲ ಅಂತಳೆ' ಅಂದ.

ಪೂಜಾರಪ್ಪನವರು 'ಅರೇ ನನ್ನ ಮಗನೂ ಹಂಗೇ ಅಂತಾನಲ್ಲಯ್ಯ' ಅಂದವರು ಮತ್ತೆ, 'ಆ ಬಿಲ್ಡಿಂಗಿನ ಕೆಳಗಿನ ಹಜಾರದಲ್ಲೆಲ್ಲ ಆನಾಡಿ ಬಟ್ಟೆ ನೇತು ಹಾಕಿರುವರಲ್ಲ, ಅದೆಲ್ಲಾ ನೀನೇ ಹೊಲಿದುಕೊಟ್ಟಿದ್ದ... ಆ ಥರ ಹೊಲಿಯದನ್ನ ಯಾವಾಗ ಕಲ್ತಕಂಡೆ ರಾಮಣ್ಣ' ಎಂಬ ನಗೆಚಟಾಕಿ ಎಬ್ಬಿಸಿದರು.

ರಾಮಯ್ಯ ''ಅಯ್ಯ... ಹಂಗ್ಯಾಕೆ ಹೊಟ್ಟೆ ಉರಿಯೋ ಮಾತಾಡೀರಿ ಬಿಡಿ ಪೂಜಾರಪ್ಪ. ನಮ್ಮಪ್ಪ ನಂಗೆ ಚಡ್ಡಿ, ಚೊಣ್ಣ, ಅಂಗಿ, ಲಂಗ ಹೊಲಕಂಡು ಮೂರೊತ್ತು ಅನ್ನ, ಮುದ್ದೆಗೆ ದಾರಿ ಮಾಡ್ಕಂಡು ಇರು ಮಗನೆ ಅಂತೇಳಿ ಸತ್ತ. ಅಲ್ಲಿ ತಗಾಕಿರದನ್ನೆಲ್ಲಾ ಯಾವನು ಹೊಲೆದನೋ ಯಾವನು ಬಂದು ಅದ ತಗಂಡು ಮೈಗಂಟಿಸಿಕೊಂಡು ಹೋಗುವನೋ... ಒಬ್ಬರಿಗೊಬ್ಬರು ಸಂದು ಸಂಬಂಧನೇ ಇಲ್ಲವಲ್ಲ. ಗ್ರಾಮದವರು ಬಂದು, ಬಟ್ಟೆ ಹರಿದುಹೋಗದೆ ರಾಮಣ್ಣ ಹೊಲಕೊಡು ಅಂದ್ರೆ, ಆ ಮಾಲಿಗೋದವರು ಹರಿದಿರೋ ವಸ್ತ್ರಕ್ಕೆ ಸಾವಿರ ಸುರಿದು ತಗಂಡು, ಅದರ ಅಂದಚಂದ ನೋಡು ಅಂತ ಹೋಯ್ತುವ್ರಲ್ಲ' ಅಂದು ಯಾವಾಗಲೂ ಒಂದು ಪಂಚೆ ಉಟ್ಟು, ಇನ್ನೊಂದು ಪಂಚೆ ಹೆಗಲ ಮೇಲೆ ಹಾಕಿ ಓಡಾಡುವ ಪೂಜಾರಪ್ಪನವರನ್ನು ಅವಾಕ್ಕಾಗುವಂತೆ ಮಾಡಿದ. ಪೂಜಾರಪ್ಪನವರು ಖುದ್ದು ವಾಸ್ತವ ವಿಚಾರಕ್ಕೆ ಬಂದವರಂತೆ, 'ಅಲ್ಲಯ್ಯ ನೀನು ನಿಮ್ಮಪ್ಪನ ಕಾಲದ ಈ ಮಿಷೀನು ಇಟ್ಕಂಡು, ನಾನು ಅದೇ ತ್ರೇತಾಯುಗದ ಹನುಮಂತನ ನಂಬ್ಕಂಡು ಕೂತಲ್ಲೇ ಕೂತುಬಿಟ್ಟೆವಲ್ಲ. ನಾವು ಆ ಬಿಲ್ಡಿಂಗಿನೊಳಗಡೆ ಜಾಗ ಮಾಡಿಕೊಂಡರೆ ಹ್ಯಾಗೆ' ಎಂಬ ಮುಂದಿನ ಪ್ರಶ್ನೆ ಎತ್ತಿಕೊಂಡರು. ಅದಕ್ಕೆ ರಾಮಣ್ಣ 'ಅಯ್ಯ ಮಾಲಿಗೆ ಹೋಗೋ ಬಾಗಿಲು, ಬರೋ ಬಾಗಿಲು ಯಾವುದು ಅಂತಲೇ ಗೊತ್ತಿಲ್ಲದೆ ಇರುವಾಗ ನಾವು ಒಳಗಡೆ ಸೇರದು ಹೆಂಗೆ ಪೂಜಾರಪ್ಪ' ಎಂಬ ದೊಡ್ಡ ಪ್ರಶ್ನೆ ಹಾಕಿದ. ಆ ಮೊದಲೇ ವೆಂಕಟರಮಣಯ್ಯನವರು ತಮ್ಮ ತಲೆಗೆ ಬಂದಿದ್ದ ಉಪಾಯವನ್ನು ರಾಮಯ್ಯನ ಮುಂದಿಟ್ಟರು. 'ಈಗ ಕಾಂಪೌಂಡ್ ಏಳಿಸುವುದಕ್ಕೆ ಅವರ ಕಡೆ ಜನ ಬರ್ತಾರೆ ಅಂದುಕೋ, ಆಗ ನೀನು ಇನ್ನೊಂದು ಸಲ ಪೈಲ್ವಾನಾಗಿ ಗುಟುರು ಹಾಕಿದರೆ ನಮ್ಮ ಕೆಲ್ಸ ಆಗಬೋದು ನೋಡು' ಎಂದರು. ರಾಮಯ್ಯನಿಗೆ ಪೂಜಾರಪ್ಪನವರ ಸಲಹೆ ಅರ್ಥವಾಗದೆ 'ತಗೀರಿ ಅಯ್ಯನೋರೆ... ನಾನು, ನೀವು ಮಾಲೊಳಗೆ ಹೋಗಿ ಮಾಡದೇನದೆ' ಅಂದ.

ಪೂಜಾರಪ್ಪನವರ ತಲೆಯಲ್ಲಿ ಬಂದಿದ್ದ ಆಲೋಚನೆ ಎಂದರೆ ಮೈಸೂರು, ಬೆಂಗಳೂರು ಸಿಟಿಗಳಲ್ಲಿ ಮಾರ್ಕೇಟು, ಸರ್ಕಲುಗಳಲ್ಲಿ ಹೊಸದಾಗಿ ಎದ್ದಿರುವ ಹನುಮಂತ, ವಿಘ್ನೇಶ್ವರ, ನವಗ್ರಹ ಗುಡಿಗಳಲ್ಲಿ ಭಾರಿ ಇನ್‌ಕಮ್ ಇದೆಯಂತಲ್ಲ. ಗುಡಿ ಹಳೆಯಕಾಲದ್ದೇನೂ ಆಗಿರಬೇಕಿಲ್ಲವಂತೆ. ಚಿಕ್ಕ ರೂಮಿದ್ದು, ಅಲ್ಲೇ ಕಬ್ಬಿಣದ ಸರಳಿನ ಕಾಂಪೌಂಡ್ ಹಾಕಿ ಪ್ರದಕ್ಷಿಣೆಗೆ ಅನುಕೂಲವಿದ್ದರೆ ಸಾಕು. ಇದೇ ತರ ಮಾಲಿಗೆ ಬಂದವರು ರಸ್ತೆಯ ಪಕ್ಕದ ಆ ಗುಡಿಗೆ ಭೇಟಿ ಕೊಟ್ಟು ಐವತ್ತು, ನೂರರ ನೋಟನ್ನು ಮಂಗಳಾರತಿ ತಟ್ಟೆಗೆ ಇರಿಸಿ ಹೋಗುವರಂತಲ್ಲ. ಅದೇ ಸೇವಾರ್ಥ ಈ ಮಾಲಿನಲ್ಲೂ ಯಾಕಾಗಬಾರದು? ನಮ್ಮ ಮಕ್ಕಳಿಗೆ ಮಾಲಿನವರೇ ಉದ್ಯೋಗ ಕೊಟ್ಟರು ಅಂದ ಮೇಲೆ ಈ ನಮ್ಮ ಯೋಚನೆಗೆ ಅವಕಾಶ ಮಾಡಿಕೊಡುವುದಿಲ್ಲವಾ ಅಂದರು.

ಪೂಜಾರಪ್ಪನವರ ಉಪಾಯ ಮೆಚ್ಚಿದ ರಾಮಣ್ಣ ತನ್ನ ಸಮಸ್ಯೆಯನ್ನು ಮುಂದಿಟ್ಟು 'ಅದ್ಸರಿ ಅಲ್ಲಿ ನನಗೇನು ಕೆಲಸ. ಈಚೆ ನಿಂತು ನಿಮ್ಮ ಪೂಜೆಗೆ ಕಾಯಿ ಒಡಕೊಡಾದ?' ಅಂದ.

ತಕ್ಕಮಟ್ಟಿಗೆ ಮೈಸೂರು, ಬೆಂಗಳೂರು ಸಿಟಿ ಸುತ್ತಿದ್ದ ಪೂಜಾರಪ್ಪನವರು 'ಅಯ್ಯೋ ರಾಮಣ್ಣ ನೀನು ದಡ್ಡ ನೋಡು. ಅದು ಇಂದ್ರಾಮಾಲು; ಕಾಯಿ ಒಡೆಯಂಗಿಲ್ಲ. ಎಳೆನೀರು ಸುರಿದು ಅಲ್ಲೆಲ್ಲಾ ಗಲೀಜಾಗಿ ಸೊಳ್ಳೆ, ನೊಣ ಮುತ್ತಿಕೊಂಡರೆ ಬಿಲ್ಡಿಂಗ್‌ನವರು ನಮ್ಮ ತಲೆ ಮೇಲೇ ಕಾಯಿ ಒಡೆದು, ಮಂಗಳಾರತಿ ಮಾಡಿ ಆಚೆ ತಳ್ತಾರೆ, ನೀನು ಅರಮನೆ ಮುಂದೆ ಕುಸ್ತಿ ಆಡಿ ಮೈ ಬೆಳೆಸಿದೆ ನೋಡು, ಬುದ್ಧಿ ಬೆಳೆದಿಲ್ಲ' ಎಂದು ತಾವು ಮುಂದೆ ಎತ್ತಿಕೊಳ್ಳುವ ಮಾತಿಗೆ ಪೀಠಿಕೆ ಹಾಕಿದರು.

ರಾಮಣ್ಣ 'ಅದೇನೇಳಿ ಪೂಜಾರಪ್ಪ... ನಿಮ್ಮದಾಯ್ತು, ನಂದೇನು ಅಂಥ ಹೇಳಬಾರದಾ' ಅನ್ನುವಲ್ಲಿ, ಇಬ್ಬರೂ ಆಡುತ್ತಿದ್ದ ಲೋಕಾಭಿರಾಮದ ಮಾತಿಗೆ ಅವರ ನಿರುದ್ಯೋಗವೇ ಕಾರಣವಾಗಿದ್ದಿತು.

ಪೂಜಾರಪ್ಪ 'ನೋಡು ರಾಮಣ್ಣ ನಾನು ಈಗ ಬಿಲ್ಡಿಂಗ್‌ನ ಯಾವುದಾದರೂ ಮೂಲೆಯಲ್ಲಿ ಗುಡಿ ಎಬ್ಬಿಸಬೇಕು ಅಂತ ಹೇಳ್ತಾ ಇದ್ದೀನಲ್ಲ. ಅದು ಹೊಸದಾಗಿ ಆಗಬೇಕಾದ ಕೆಲಸ. ಆದರೆ ಈ ಮಾಲಿನಲ್ಲಿ ನಿನ್ನ ನೌಕರಿ ಹಂಗಲ್ಲ. ಅದು ಸುಲಭ. ಈ ಬಿಲ್ಡಿಂಗಿನ ಕೆಳ ಅಂತಸ್ತಿನಲ್ಲಿ ತುಂಬ ಕಾಣಿಸುವುದು ಯಾವುದಪ್ಪ?'

'ಅದೇ ಆ ಬಟ್ಟೆ ಫ್ಯಾಕ್ಟರಿ.'

'ಬಟ್ಟೆ ಷೋರೂಂ ಅನ್ನು, ಫ್ಯಾಕ್ಟರಿ ಅಲ್ಲ. ಈಗ ಅಲ್ಲಿ ಹುಡುಗ, ಹುಡುಗೀರು ಬಂದು ಬಟ್ಟೆ ಅಳತೆ ನೋಡ್ತರೆ. ಒಂದು ಚೂರು ಪಾರು ಹೆಚ್ಚು ಕಮ್ಮಿ ಆಗಿರಲ್ವ. ಅದನ್ನ ಅಲ್ಲೇ ರಿಪೇರಿ ಮಾಡಿಕೊಡಂಥ ಟೈಲರ್ ಎಲ್ಲವನೇ. ಬಂದವರು ತಾನೇ ಹಾಗೆ ಹೋಗುವರಾ? ಸಾಯಂಕಾಲ ಕಳೆದು ರಾತ್ರಿ ಮಾಡ್ಕಂಡು, ಕುಡಿದು, ಕುಣಿದು ಹೋಗುತ್ತಾರಲ್ಲ, ಅಂಥವರ ಬಟ್ಟೇನಾ ಅಷ್ಟಿಷ್ಟು ರಿಪೇರಿ ಅಂದರೆ ಉದ್ದ–ತುಂಡು ಮಾಡಬೇಕು. ಅದಕ್ಕೆ ಒಬ್ಬ ಟೈಲರ್ ಬೇಕೋ ಬೇಡವೋ... ನಿಂಗೇನು ನನ್ನ ಗುಡಿಗೆ ಬೇಕಾದಷ್ಟು ಜಾಗ ಬೇಕಿಲ್ಲವಲ್ಲ. ಅಲ್ಲೆಲ್ಲೂ ಒಂದು ಗೊಂಬೆ ಹಿಂದುಗಡೆ ಮಿಷಿನ್ ಇಟ್ಕಂಡು ಕೂತ್ರೆ ಆಯಿತಲ್ಲ. ಇಲ್ಲಿ ಅಂಗಿ, ಚೆಡ್ಡಿ ಎಲ್ಲಾ ಸೇರಿಸಿ ಹತ್ತು, ಇಪ್ಪತ್ತು ಕೊಟ್ಟರೆ ಅಲ್ಲಿ ಬರೀ ಉದ್ದ ತುಂಡು ಮಾಡಲು ನೂರಿನ್ನೂರು ಕಮಾಯಿ ಆಗುವುದಲ್ಲ.'

'ಪೂಜಾರಪ್ಪ ನೀವು ಸರಿಯಾದ ತಲೆಗಾರ ಅಂತೀನಿ. ಅದಕ್ಕೆ ನೋಡಿ ನಾನು ಅಖಾಡದಲ್ಲಿ ಕುಸ್ತಿ ಹಿಡಿದು ಮಣ್ಣು ಮುಕ್ಕಿ ಬಂದರೆ, ನೀವು ಅರಮನೆ ಒಳಗಡೆ ಪೂಜೆ ಮಾಡ್ಕಂಡು ಪಾಯಸ ಕುಡ್ಕಂಡು ಬಂದಿದ್ದು.' ಇಬ್ಬರೂ ನಕ್ಕರು. ಅದಾಗ ಪೂಜಾರಪ್ಪನವರಿಗಿಂತಲೂ ಮುಂದಾಗಿ ರಾಮಯ್ಯನೇ ಮಾತಾಡಿದ.

'ಪೂಜಾರಪ್ಪ ಹೋದ ಸರ್ತಿ ಕಾಂಪೌಂಡು, ಕಾರು ಪಾರ್ಕು ಅಂತ ಕಂತ್ರಾಟುದಾರರು, ಮೇಸ್ತ್ರಿ ಬಂದಾಗ ನಾನು ಹೆಂಗೆ ಬಾಯಿ ಮಾಡಿದೆ ಹೇಳಿ.'

'ಅಯ್ಯೋ ರಾಮಣ್ಣ ನಿಂಗೆ ಬರೋವಷ್ಟು ಸಂಸ್ಕೃತ ನನಗೆ ಬರೋಲ್ಲವಲ್ಲಪ್ಪ. ನನ್ನತ್ರ ಇರೋದು ಏನಿದ್ದರೂ ಅಷ್ಟೋತ್ತರ ಶತನಾಮಾವಳಿ, ಸಕಲ ಮಂತ್ರಾಗಮ ಚೂಡಾಮಣಿ, ಮಾರುತಿ ಪೂಜಾನುಷ್ಠಾನ ಇವಿಷ್ಟೇ ಕಣಯ್ಯ' ಅನ್ನುವಲ್ಲಿ ರಾಮಣ್ಣ, 'ಬರಲಿ ಆ ಹಲಾಲಖೋರರು, ಅವರ ಬಣ್ಣದ ಬಿಲ್ಡಿಂಗ್ ಕಟ್ಟಕೆ ನಮ್ಮ ಊರು ಕೇರಿಯವರೆಲ್ಲಾ ಗುಳೆ ಎದ್ದು ಹೋಗಬೇಕಾ? ಬಂದವರಿಗೆಲ್ಲಾ ಸಲಾಮು ಹೊಡೆಯಕೆ ನಮ್ಮ ಹುಡುಗರೇ ಬೇಕಾ' ಅಂದು ಗುಡುಗತೊಡಗಿದ.

ಪೂಜಾರಪ್ಪನವರು ಅರೇ ಈ ಮುಂಡೇಗಂಡ ನಮ್ಮ ಬಿನ್ನವತ್ತಳೆಯ ಸಂಗತಿಯನ್ನು ದುಡುಕಿನಿಂದ ದಿಕ್ಕು ತಪ್ಪಿಸುತ್ತಿರುವನಲ್ಲ ಅಂದುಕೊಳ್ಳುತ್,ತ 'ಅಂಗಲ್ಲ ರಾಮಣ್ಣ... ನೀನು ಸಮಾಧಾನವಾಗೇ ಇರು. ಅವರು ಕಾಂಪೌಂಡ್ ಜಾಗ ಒತ್ತುವರಿ ಅಂತ ಬಂದಾಗ ನಮ್ಮ ಈ ಉದ್ಯೋಗದ ಉಪಾಯ ಮುಂದಿಡೋಣ, ಅಂಗಳದ ಇನ್ನೊಂದಿಷ್ಟು ಜಾಗದಲ್ಲಿ ಕಾಂಪೌಂಡ್ ಹಾಕಲಿ. ನಮಗೂ ಮಾಲಿನಲ್ಲಿ ಜಾಗ ಕೊಡಲಿ, ಆಯ್ತಲ್ಲ' ಅಂದರು. ಖಾಲಿ ಬಿದ್ದ ಮುರುಟಿ ಕ್ಯಾತನಪುರದಲ್ಲಿ ತಮ್ಮಿಬ್ಬರಿಗೆ ಒಂದು ದಾರಿ ಕಂಡುಬಂದಿತೆಂದು ನಿರಾಳವಾದರು.

* * *

## ವಾಸ್ತವ

ಕನಸಿನ ಅರಮನೆ
ನನ್ನ ಮನಸು
ನೋಡಲು ಅಸಾಧ್ಯವಾಗಿ
ಚಡಪಡಿಸುವುದು
ನನ್ನ ಪ್ರಾರಬ್ಧ!

—ವಿ.ಸುಬ್ರಹ್ಮಣ್ಯ ಭಟ್

